ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜ್ಯಪಾಲರು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ    ದಿನಾಂಕ : DATE : 21/07/2019

### ಅತೃಪ್ತ ಶಾಸಕರ ಮನವೊಲಿಕೆಗೆ ಖುದ್ದು ದೇವೇಗೌಡರೇ ಅಖಾಡಕ್ಕೆ

# ದೋಸ್ತಿಗಳ ಅಂತಿಮ ಕಸರತ್ತು

## ಹಿರಿಯ ಕಾಂಗ್ರೆಸ್ಸಿಗ ರಾಮಲಿಂಗಾರೆಡ್ಡಿ ಅವರನ್ನು ಮನೆಗೇ ಕರೆಸಿ ಫೋನ್ ಮಾಡಿಸಿದ ಮಾಜಿ ಪ್ರಧಾನಿ
## ಕರೆ ಸ್ವೀಕರಿಸದ ಬೈರತಿ, ಸೋಮಶೇಖರ್, ಮುನಿರತ್ನ | ದೋಸ್ತಿ ಪಕ್ಷಗಳ ನಾಯಕರಿಗೆ ಹೆಚ್ಚಿದ ಆತಂಕ

21/7/19

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಆಡಳಿತಾರೂಢ ಮೈತ್ರಿಕೂಟ ಹಾಗೂ ಬಿಜೆಪಿ ನಡುವೆ ಅಧಿಕಾರಕ್ಕಾಗಿ ನಡೆದಿರುವ ಹಗ್ಗ-ಜಗ್ಗಾಟದ ಮತ್ತೊಂದು ಹಂತದ ಪ್ರಹಸನಕ್ಕೆ ಸೋಮವಾರ ಮುಹೂರ್ತ ನಿಗದಿಯಾಗಿದೆ. ಹೀಗಾಗಿ, ಸರ್ಕಾರವನ್ನು ಉಳಿಸಿಕೊಳ್ಳುವತಮ್ಮ ಅಂತಿಮ ಪ್ರಯತ್ನವನ್ನು ಶನಿವಾರ ದಿನವಿಡೀ ನಡೆಸಿದ ಮೈತ್ರಿಕೂಟದ ನಾಯಕರು, ಅತೃಪ್ತರನ್ನು ಸಂಪರ್ಕಿಸಿ ಅವರ ಮನವೊಲಿಸಲು ತೀವ್ರ ಪ್ರಯತ್ನ ನಡೆಸಿದರು.



ಕುತೂಹಲಕಾರಿ ಸಂಗತಿಯೆಂದರೆ, ಈ ಬಾರಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರೇ ಖುದ್ದು ಅಖಾಡಕ್ಕೆ ಇಳಿದದ್ದು. ಅತೃಪ್ತರ ಗುಂಪಿನಲ್ಲಿರುವ ಬೆಂಗಳೂರಿನ ಶಾಸಕರ ತಂಡದ ನೇತೃತ್ವ ವಹಿಸಿದ್ದ ಹಿರಿಯ ಕಾಂಗ್ರೆಸ್ಸಿಗ ರಾಮಲಿಂಗಾ ರೆಡ್ಡಿ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡ ದೇವೇಗೌಡರು, ಅವರ ಮೂಲಕ ಅತೃಪ್ತರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರು. ಆದರೆ, ಅದು ಸಾಧ್ಯವಾಗದೆ ದೋಸ್ತಿ ನಾಯಕರು ಮತ್ತಷ್ಟು ಆತಂಕಕ್ಕೆ ಈಡಾದರು ಎಂದು ಮೂಲಗಳು ತಿಳಿಸಿವೆ. ಈ ನಡುವೆ, ಅತೃಪ್ತರ ಗುಂಪಿನತ್ತ ಮೈತ್ರಿಕೂಟದ ಮತ್ತಷ್ಟು ಶಾಸಕರು ಆಕರ್ಷಿತರಾಗಬಹುದು ಎಂಬ ಆತಂಕವೂ ಮೈತ್ರಿ ಕೂಟದ ನಾಯಕರಿಗೆ ಕಾಣಿಸಿಕೊಂಡಿತ್ತು.

➘10

### ವಿಶ್ವಾಸಮತ ನಾಳೆಯಾ? ಬುಧವಾರಕ್ಕೆ ಹೋಗುತ್ತಾ?

ವಿಶ್ವಾಸಮತ ಯಾಚನೆ ಸೋಮವಾರ ನಡೆಯುವುದೇ, ಬುಧವಾರಕ್ಕೆ ಹೋಗುವುದೇ ಎಂಬ ಪ್ರಶ್ನೆ ಎದ್ದಿದೆ. ಸೋಮವಾರವೇ ಪೂರ್ಣಗೊಳಿಸುವ ಮನಸ್ಥಿತಿಯಲ್ಲಿ ಕಾಂಗ್ರೆಸ್ ಇದೆ. ಆದರೆ, ಇನ್ನೂ 20 ಶಾಸಕರು ಮಾತಾಡಬೇಕಿರುವ ಕಾರಣ ಮಂಗಳವಾರ, ಬುಧವಾರದ ವರೆಗೂ ಸದನ ನಡೆಸುವ ಬಗ್ಗೆ ಜೆಡಿಎಸ್‌ನಲ್ಲಿ ಚಿಂತನೆಯಿದೆ ಎನ್ನಲಾಗುತ್ತಿದೆ. ಇದಕ್ಕೆ ಸ್ಪೀಕರ್ ಒಪ್ಪುವರೇ ಎಂಬ ಪ್ರಶ್ನೆ ಇದೆ. ಈ ಬಗ್ಗೆ ಭಾನುವಾರ ದೋಸ್ತಿಗಳು ಚರ್ಚಿಸುವ ನಿರೀಕ್ಷೆ ಇದೆ.

### ಸಿಎಂ ಆಗಿ ಎಂದ ಜೆಡಿಎಸ್, ಆಗೋದಿಲ್ಲ ಎಂದ ಸಿದ್ದು?



ಮೈತ್ರಿ ಸರ್ಕಾರ ಉಳಿಸಲು ಸಿಎಂ ಹುದ್ದೆಯನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡುವ ಪ್ರಸ್ತಾವನೆ ಜೆಡಿಎಸ್ ನಾಯಕತ್ವ ಮತ್ತೊಮ್ಮೆ ಮುಂದಿಟ್ಟಿತು. ಸಿದ್ದರಾಮಯ್ಯ ಅವರನ್ನು ಸಂಪರ್ಕಿಸಿ, ಸರ್ಕಾರ ಉಳಿಯುವುದಾದರೆ ಮುಖ್ಯಮಂತ್ರಿ ಬದಲಾವಣೆಗೆ ಸಿದ್ಧ. ಅತೃಪ್ತರು ಒಪ್ಪಿದರೆ ಸಿಎಂ ಹುದ್ದೆ ನೀವೇ ವಹಿಸಿಕೊಳ್ಳಿ ಎಂಬ ಸಂದೇಶ ನೀಡಿತ್ತು. ಆದರೆ, ಸಿದ್ದು ನಿರಾಕರಿಸಿ, ಈ ಹಂತದಲ್ಲಿ ಸಿಎಂ ಬದಲಾವಣೆ [illegible] ಎಂದರು ಎಂದು [illegible].

## ಸಾಂವಿಧಾನಿಕ ಬಿಕ್ಕಟ್ಟು: ರಾಜ್ಯಪಾಲರ ವರದಿ

### ಕೇಂದ್ರ ಗೃಹ ಕಾರ್ಯದರ್ಶಿಗೆ ರವಾನೆ

**ವರದಿಯಲ್ಲೇನಿದೆ?**

1. ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಸರ್ಕಾರ ಅಲ್ಪಮತಕ್ಕೆ ಕುಸಿದಿದೆ
2. ಬಹುಮತ ಸಾಬೀತಿಗೆ 2 ಬಾರಿ ಸೂಚನೆ ಕೊಟ್ಟಿದ್ದೆ, ಸರ್ಕಾರದ ಆದೇಶ ಪಾಲಿಸಿಲ್ಲ
3. ಬಹುಮತ ಇಲ್ಲದೆ ಯಾವುದೇ ಪ್ರಮುಖ ನಿರ್ಧಾರ ಕೈಗೊಳ್ಳಬೇಡಿ ಎಂದಿದ್ದೆ
4. ಆದರೆ, ಸರ್ಕಾರ ನೌಕರರ ವರ್ಗಾವಣೆ ಸೇರಿ ಕೆಲ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ
5. ಕೇಂದ್ರ ಗೃಹ ಸಚಿವಾಲಯಕ್ಕೆ ರವಾನಿಸಿದ ವಿಸ್ತೃತ ವರದಿಯಲ್ಲಿ ಗೌರ್ನರ್ ವಿವರಣೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸುವಂತೆ ಎರಡು ಬಾರಿ ನಿರ್ದೇಶನ ನೀಡಿದರೂ ಅದನ್ನು ಪರಿಗಣಿಸದ ಮೈತ್ರಿ ಸರ್ಕಾರದ ವಿರುದ್ಧ ರಾಜ್ಯಪಾಲರು ಕೇಂದ್ರಕ್ಕೆ ವರದಿ ಸಲ್ಲಿಸಿದ್ದಾರೆ.



ರಾಜ್ಯಪಾಲ ವಿ.ಆರ್. ವಾಲಾ ಅವರು ರಾಜ್ಯ ರಾಜಕೀಯದ ಪರಿಸ್ಥಿತಿ ಕುರಿತು ಕೇಂದ್ರ ಗೃಹ ಕಾರ್ಯದರ್ಶಿಗೆ ವರದಿ ನೀಡಿದ್ದಾರೆ. ಕರ್ನಾಟಕದಲ್ಲಿನ ಸಮ್ಮಿಶ್ರ ಸರ್ಕಾರ ಬಹುಮತ ಕಳೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಬಹುಮತ ಸಾಬೀತುಪಡಿಸುವಂತೆ ಮುಖ್ಯಮಂತ್ರಿಗಳಿಗೆ ಎರಡು ಬಾರಿ ಸೂಚನೆ ನೀಡಲಾಗಿತ್ತು. ಆದರೂ ರಾಜ್ಯ ಸರ್ಕಾರ ಸೂಚನೆಯನ್ನು ಪಾಲನೆ ಮಾಡದೆ ಉಲ್ಲಂಘನೆ ಮಾಡಿದೆ.

➘6

# ದೋಸ್ತಿಗಳ ಅಂತಿಮ ಕಸರತ್ತು

3ನೇ ಪುಟದಿಂದ

ಹೀಗಾಗಿ ಅನುಮಾನವಿರುವ ಶಾಸಕರ ಮೇಲೆ ಸೋಮವಾರ ಸದನ ಆರಂಭವಾಗುವವರೆಗೂ ತೀವ್ರ ಕಣ್ಗಾವಲಿಡುವ ದಿಸೆಯಲ್ಲೂ ಮೈತ್ರಿ ನಾಯಕರು ಕಾರ್ಯಪ್ರವೃತ್ತರಾದರು. ಆದರೆ, ರೆಸಾರ್ಟ್ ವಾಸದಿಂದ ಕಂಗೆಟ್ಟಿರುವ ಶಾಸಕರು ಕ್ಷೇತ್ರಗಳಿಗೆ ತೆರಳಲು ದುಂಬಾಲು ಬಿದ್ದದ್ದು ನಾಯಕರಿಗೆ ತಲೆನೋವು ತಂದಿತ್ತು. ಪರಿಣಾಮ ತೀವ್ರ ಅನುಮಾನವಿರುವ ಶಾಸಕರನ್ನು ರೆಸಾರ್ಟ್ ಹಾಗೂ ಹೋಟೆಲ್‌ನಲ್ಲಿ ಕಣ್ಗಾವಲಿನಲ್ಲಿರಿಸಲಾಗಿದ್ದು, ಉಳಿದ ಶಾಸಕರಿಗೆ ಕ್ಷೇತ್ರಕ್ಕೆ ತೆರಳಲು ಅವಕಾಶ ಮಾಡಿಕೊಡಲಾಗಿದೆ.

**ದೇವೇಗೌಡರ ಪ್ರಯತ್ನ:** ಮೈತ್ರಿ ಸರ್ಕಾರವನ್ನು ಉಳಿಸಿಕೊಳ್ಳಲು ದೇವೇಗೌಡ ಅವರು ಶನಿವಾರ ಪ್ರಯತ್ನ ನಡೆಸಿದ್ದು, ರಾಮಲಿಂಗಾರೆಡ್ಡಿ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಕೆಲ ಕಾಲ ಮಾತುಕತೆ ನಡೆಸಿದರು. ಅನಂತರ ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್, ರಾಜರಾಜೇಶ್ವರಿ ನಗರ ಶಾಸಕ ಮುನಿರತ್ನ, ಕೆ.ಆರ್. ಪುರ ಶಾಸಕ ಭೈರತಿ ಬಸವರಾಜು ಅವರೊಂದಿಗೆ ತಾವು ಮಾತನಾಡುವ ಆಕಾಂಕ್ಷೆ ವ್ಯಕ್ತಪಡಿಸಿ, ಅವರನ್ನು ದೂರವಾಣಿ ಮೂಲಕ ಸಂಪರ್ಕಿಸುವಂತೆ ಕೋರಿಕೊಂಡರು ಎನ್ನಲಾಗಿದೆ. ಅನಂತರ, ರಾಮಲಿಂಗಾರೆಡ್ಡಿ ಅವರು ಸೋಮಶೇಖರ್, ಮುನಿರತ್ನ ಹಾಗೂ ಭೈರತಿ ಬಸವರಾಜು ಅವರಿಗೆ ಪ್ರತ್ಯೇಕವಾಗಿ ದೂರವಾಣಿಯಲ್ಲಿ ಸಂಪರ್ಕಿಸಲು ಯತ್ನಿಸಿದ್ದು, ಈ ಮೂವರ ಮೊಬೈಲ್ ರಿಂಗಣಿಸಿದರೂ ಅವರ್‍ಯಾರೂ ಕರೆ ಸ್ವೀಕರಿಸಲಿಲ್ಲ. ಕೆಲ ಕಾಲ ಈ ಪ್ರಯತ್ನ ನಡೆಸಿದ ನಂತರ ದೇವೇಗೌಡ ಶಾಸಕರನ್ನು ಸಂಪರ್ಕಿಸುವ ಇತರ ಮಾರ್ಗಗಳನ್ನು ಅನ್ವೇಷಿಸುವಂತೆ ಹಾಗೂ ಅವರು ಸಂಪರ್ಕಕ್ಕೆ ದೊರೆತರೇ ತಮ್ಮೊಂದಿಗೆ ನೇರವಾಗಿ ಮಾತನಾಡಿಸುವಂತೆ ರಾಮಲಿಂಗಾರೆಡ್ಡಿ ಅವರಿಗೆ ಹೇಳಿದರು ಎಂದು ಮೂಲಗಳು ಹೇಳಿವೆ.

**ಸಿದ್ದರಾಮಯ್ಯ ಸರಣಿ ಸಭೆ:** ಮತ್ತೊಂದೆಡೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾವೇರಿ ನಿವಾಸದಲ್ಲೂ ಸರಣಿ ಸಭೆಗಳನ್ನು ನಡೆಸಿ ಸರ್ಕಾರವನ್ನು ಉಳಿಸಿಕೊಳ್ಳುವ ಬಗ್ಗೆ ಗಂಭೀರ ಚರ್ಚೆ ನಡೆಸಲಾಯಿತು. ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್, ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ, ಸಚಿವರಾದ ಡಿ.ಕೆ. ಶಿವಕುಮಾರ್, ಜಮೀರ್ ಅಹಮದ್ ಖಾನ್, ಆರ್.ವಿ. ದೇಶಪಾಂಡೆ, ಸತೀಶ್ ಜಾರಕಿಹೊಳಿ, ಮಾಜಿ ಸಚಿವ ಎಚ್.ಎಂ. ರೇವಣ್ಣ ಸೇರಿದಂತೆ ಹಲವು ನಾಯಕರು ಆಗಮಿಸಿದ್ದರು. ಈ ವೇಳೆ ಯಾವುದೇ ಕಾರಣಕ್ಕೂ ಪಕ್ಷದ ಶಾಸಕರು ಕೈ ತಪ್ಪಿ ಹೋಗಬಾರದು. ಸೋಮವಾರ ನಡೆಯುವ ವಿಶ್ವಾಸ ಮತ ಯಾಚನೆ ವೇಳೆ ಸಂಖ್ಯಾಬಲ ಸಾಬೀತುಪಡಿಸಲು ಇನ್ನೂ ಅವಕಾಶಗಳಿವೆ. ಈ ಹಿನ್ನೆಲೆಯಲ್ಲಿ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಹೀಗಾಗಿ ಯಾವುದೇ ಕಾರಣಕ್ಕೂ ಎಚ್ಚರ ತಪ್ಪಬಾರದು ಎಂದು ಎಚ್ಚರಿಕೆ ನೀಡಿದರು ಎನ್ನಲಾಗಿದೆ.

ಸೋಮವಾರ ವಿಧಾನಸಭೆಯಲ್ಲಿ ವಿಶ್ವಾಸ ಮತ ನಿರ್ಣಯವನ್ನು ಮತಕ್ಕೆ ಹಾಕುವುದರಿಂದ ಉಳಿದಿರುವ ಸಮಯದಲ್ಲಿ ಅತೃಪ್ತರನ್ನು ಹಿಂದಕ್ಕೆ ಕರೆಸಲು ಮೈತ್ರಿಕೂಟದ ಎಲ್ಲಾ ನಾಯಕರು ತೀವ್ರ ಪ್ರಯತ್ನ ನಡೆಸಿದ್ದಾರೆ ಎನ್ನಲಾಗಿದೆ.

**ಹೆಚ್ಚಿದ ಆತಂಕ:** ಈ ನಡುವೆ, ಹೃದಯ ಸಂಬಂಧಿ ಸಮಸ್ಯೆಯಿಂದ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಬಿ. ನಾಗೇಂದ್ರ ಅವರು ಮುಂಬೈಗೆ ಹಾರಿದ್ದಾರೆ ಎಂಬ ವದಂತಿಯೂ ನಾಯಕರಿಗೆ ಆತಂಕ ಹುಟ್ಟಿಸಿತ್ತು. ಆದರೆ, ನಾಗೇಂದ್ರ ಅವರು ಚಿಕಿತ್ಸೆಗೆ ದಾಖಲಾಗಿರುವ ಆಸ್ಪತ್ರೆಯಲ್ಲಿ ಮತ್ತೊಂದು ಕೋಣೆಗೆ ಸ್ಥಳಾಂತರವಾಗಿದ್ದರಿಂದ ಇಂತಹ ವದಂತಿ ಹುಟ್ಟಿಕೊಂಡಿದ್ದು, ಅವರು ರಾಜಧಾನಿಯಲ್ಲೇ ಇದ್ದಾರೆ ಎಂದು ನಾಗೇಂದ್ರ ಅವರ ಕುಟುಂಬಸ್ಥರು ಸ್ಪಷ್ಟಪಡಿಸಿದ್ದರಿಂದ ಮೈತ್ರಿ ನಾಯಕರು ನಿರಾಳರಾದರು.

ಇದರ ಬೆನ್ನಲ್ಲೇ ಆಸ್ಪತ್ರೆಯಲ್ಲಿ ನಾಗೇಂದ್ರ ಅವರನ್ನು ಭೇಟಿ ಮಾಡಿದ ಸಚಿವ ಜಮೀರ್ ಅಹಮದ್ ಖಾನ್ ಸದನಕ್ಕೆ ಆಗಮಿಸಿ ಸರ್ಕಾರದ ಪರ ಮತ ಚಲಾಯಿಸುವಂತೆ ಮನವೊಲಿಸುವ ಕಸರತ್ತು ನಡೆಸಿದರು.

# ಸಾಂವಿಧಾನಿಕ
# ರಾಜ್ಯಪಾಲರ

3ನೇ ಪುಟದಿಂದ

ಕರ್ನಾಟಕದಲ್ಲಿ ಸಾಂವಿಧಾನಿಕ
ಎಂದು ರಾಜ್ಯಪಾಲರು ವರ
ರಾಜಕೀಯ ಬೆಳವಣಿಗೆ ಜತೆಗೆ
ಕುರಿತು ಸದನದಲ್ಲಿ ನಡೆದ
ವರದಿಯಲ್ಲಿ ಉಲ್ಲೇಖಿಸಿದ್ದಾರೆ
ತಿಳಿಸಿವೆ. ರಾಜಭವನದ ಮ
ಅವರು ಸದನದ ಕಲಾಪವನ್ನು
ಆಧಾರದ ಮೇಲೆ ಕೇಂದ್ರಕ್ಕೆ
ವರದಿಯನ್ನು ನೀಡಿದ್ದಾರೆ.
ಶಾಸಕರು ತಮ್ಮ ಬಳಿ ಬಂದು
ನೀಡಿರುವ ಬಗ್ಗೆ ಕೇಂದ್ರಕ್ಕೆ
ಹೀಗಾಗಿ ವಿಧಾನಸಭೆಯ
ರಾಜೀನಾಮೆ ಸಲ್ಲಿಸಿದ್ದಾರೆ.
ಮಾಡಿದ್ದಾರೆ. ಅಲ್ಲದೇ,
ಇಬ್ಬರು ಪಕ್ಷೇತರರು ಸಹ
ನೀಡಿ, ಬಿಜೆಪಿಗೆ ಬೆಂಬಲ
ಎಂದು ಹೇಳಲಾಗಿದೆ.
ಸರ್ಕಾರದ ಜತೆಗೆ 101
113 ಸದಸ್ಯರ ಅಗತ್ಯ
ರಾಜೀನಾಮೆ ನೀಡಿರುವ
ಸರ್ಕಾರಕ್ಕೆ ಬಹುಮತ
ಪ್ರಮುಖ ನಿರ್ಧಾರ ಕೈಗೊ
ಅವರೂ ವರ್ತಾವನೆ
ಕೈಗೊಳ್ಳುತ್ತಿದ್ದಾರೆ ಎಂಬ
ವರದಿಯಲ್ಲಿ ವಿವರಿಸಿದ್ದಾ